# ಕೀರ್ತಿ ಶನಿಯ ಕಾಟ

ತನ್ನಷ್ಟಕ್ಕೆ ತಾನೇ ಆಡಿಕೊಳ್ಳುತ್ತಾ ಮಲಗಿದ್ದ ಮಗು ಇದ್ದಕ್ಕಿದ್ದಂತೆ ಅಳಲು ಪ್ರಾರಂಭಿಸುತ್ತದೆ. ನಿಧಾನವಾಗಿ ಪ್ರಾರಂಭವಾದ ಅಳು ಕ್ರಮೇಣ ತೀವ್ರಗೊಳ್ಳುತ್ತದೆ. ಸ್ವಲ್ಪ ದೂರದಲ್ಲಿ ಏನೋ ಕೆಲಸದಲ್ಲಿ ತೊಡಗಿಕೊಂಡಿದ್ದ ಅಮ್ಮ ಓಡೋಡಿ ಬಂದು ಮಗುವನ್ನೆತ್ತಿಕೊಂಡು ಎದೆಯೊಡಿಸುತ್ತಾಳೆ. ತಾಯಿ ಎತ್ತಿಕೊಂಡೊಡನೆ ಸುಮ್ಮನಾದ ಮಗು ಹೊಟ್ಟೆ ತುಂಬಿದಾಗ ಮೊದಲಿನಂತೆ ಆಟವಾಡತೊಡಗುತ್ತದೆ; ಇಲ್ಲವೇ ನಿದ್ದೆಗೆ ಜಾರಿಕೊಳ್ಳುತ್ತದೆ. ಇದರಲ್ಲೇನು ವಿಶೇಷ ಎನ್ನಬಹುದು. ಹಸಿವಾದೊಡನೆಯೇ ಮಗು ಅಳಲು ಪ್ರಾರಂಭಿಸಿದುದು ಅಮ್ಮನ ಗಮನವನ್ನು ತನ್ನತ್ತ ಸೆಳೆಯುವ ಸಲುವಾಗಿ. ಹೀಗೆಯೇ ಇತರರು ತನ್ನನ್ನು ಗಮನಿಸುತ್ತಿಲ್ಲವೆಂದು ಅನ್ನಿಸಿದಾಗೆಲ್ಲಾ ಮಗು ಹಟಮಾಡುತ್ತದೆ. ಹೀಗೆ ಬೇರೊಬ್ಬರ 'ಗಮನ ಸೆಳೆಯುವ' ಹಂಬಲ ಮನುಷ್ಯನಲ್ಲಿ ಶೈಶವದಿಂದಲೇ ಕಾಣಿಸಿಕೊಳ್ಳುತ್ತದೆ. ವ್ಯಕ್ತಿ ಬೆಳೆದಂತೆಲ್ಲಾ ಈ ಪ್ರವೃತ್ತಿಯೂ ಬೆಳೆಯುತ್ತಾ ಬಂದು, ಕ್ರಮೇಣ ಪ್ರಸಿದ್ಧಿಯ ಹಂಬಲವಾಗಿ ರೂಪುಗೊಳ್ಳುತ್ತದೆ. ಮನುಷ್ಯನ ಪಾಲಿಗೆ 'ಕೀರ್ತಿ ಶನಿಯ ಕಾಟ' ಪ್ರಾರಂಭವಾಗುವುದು ಹೀಗೆ, ಹಂತ ಹಂತವಾಗಿ.

ಕೀರ್ತಿಗಾಗಿ ಹಪ ಹಪಿಸುವ ಪ್ರವೃತ್ತಿ ಮನುಷ್ಯನಲ್ಲಿರುವ ಬಹುದೊಡ್ಡ ದೌರ್ಬಲ್ಯವೆನ್ನಬಹುದು. ಒಬ್ಬ ಸಾಮಾನ್ಯ ಮನುಷ್ಯನಲ್ಲೂ- ಮನಸ್ಸಿನ ಯಾವುದೋ ಒಂದು ಮೂಲೆಯಲ್ಲಿ- ತನ್ನನ್ನು ಕೆಲವರಾದರೂ ಗುರುತಿಸಲಿ, ತನ್ನ ಕುರಿತು ಒಂದೆರಡಾದರೂ ಪ್ರಶಂಸೆಯ ಮಾತುಗಳು ಬರಬೇಕು ಎಂಬ ಬಯಕೆ ಮಿಸುಕಾಡುತ್ತಿರುತ್ತದೆ. ಇದರಲ್ಲಿ ತಪ್ಪೇನೂ ಇಲ್ಲ. ಹಾಗೆ ನೋಡಿದರೆ ಈ ಬಯಕೆಯಿಂದ ಮನುಷ್ಯನಲ್ಲಿರುವ ಯಾವುದೋ ಒಂದು ಗುಣ ವಿಶೇಷವೋ ಪ್ರತಿಭೆಯೋ ಪ್ರಕಟಗೊಳ್ಳಲು ಸಹಾಯವಾಗುತ್ತದೆ. ಎಷ್ಟೋ ಬಾರಿ ಪ್ರಶಂಸೆ ಪ್ರಸಿದ್ಧಿಗಳು ಉತ್ತೇಜಕಗಳಂತೆ ಕೆಲಸ ಮಾಡಿ ವ್ಯಕ್ತಿಯನ್ನು ಹುರಿದುಂಬಿಸಿ ಮತ್ತಷ್ಟು ಸಾಧನೆಗೆ ಪ್ರೋತ್ಸಾಹಿಸುತ್ತವೆ. ಆದರೆ ಖ್ಯಾತಿಯನ್ನು ಗಳಿಸಬೇಕೆಂಬ ಹಂಬಲ ಒಂದು ಗೀಳಾಗಿ ರೂಪಾಂತರಗೊಳ್ಳಬಾರದು, ಅಷ್ಟೆ.

ಕೀರ್ತಿ ಎಂಬುದು ಉಪ್ಪು ನೀರಿದ್ದಂತೆ; ಅದನ್ನು ಎಷ್ಟು ಕುಡಿದರೂ ದಾಹ ತಣಿಯುವುದೇ ಇಲ್ಲ. 'ಮನ್ನಣೆಯ ದಾಹ'ಕ್ಕೆ ತೃಪ್ತಿಯೆಂಬುದೇ ಇಲ್ಲ. ನಮ್ಮ ಕೆಲಸದಿಂದ ಯಾರಿಗಾದರೂ ಪ್ರಯೋಜನವಾಗುವಂತಿದ್ದು, ತನ್ಮೂಲಕ ಖ್ಯಾತಿ ದೊರೆಯುವಂತಾದರೆ ತಪ್ಪೇನಿಲ್ಲ. ಆದರೆ ಖ್ಯಾತಿಯನ್ನು ಪಡೆಯುವ ಸಲುವಾಗಿಯೇ ಕೆಲವರು ಏನೇನೋ ಮಾಡುತ್ತಾರೆ. ತಮ್ಮ ಹೆಸರು ಗಿನ್ನಿಸ್ ದಾಖಲೆಯಲ್ಲಿ ಕಾಣಿಸಿಕೊಳ್ಳಬೇಕೆಂಬ ಬಯಕೆಯಿಂದ ಬ್ಲೇಡುಗಳನ್ನು ಅಗಿಯುವ, ಮೊಳೆಗಳನ್ನು ನುಂಗುವ, ಮೈಯಲ್ಲಿನ ರಂಧ್ರ ರಂಧ್ರಗಳಲ್ಲಿ ಚುಚ್ಚಿಸಿಕೊಳ್ಳುವ, ಹಾವು ಹಲ್ಲಿಗಳನ್ನು ಜೀವಂತವಾಗಿ ನುಂಗುವ ಮಂದಿ ನಿಜವಾಗಿಯೂ ಕೀರ್ತಿ ಶನಿಯ ಕಾಟಕ್ಕೆ ಒಳಗಾಗಿರುವವರು ಎಂದರೆ ತಪ್ಪಲ್ಲ.

ಪ್ರಚಾರ ಮಾಧ್ಯಮಗಳು ವಿಜೃಂಭಿಸುತ್ತಿರುವ ಈ ಕಾಲ ಘಟ್ಟದಲ್ಲಂತೂ, ತಮ್ಮ ಹೆಸರು ಎಲ್ಲೆಡೆ ಕೇಳಿಸಬೇಕು, ತಮ್ಮ ಸಾಧನೆಗಳು ಜಗಜ್ಜಾಹೀರಾಗಬೇಕು, ಮಾಧ್ಯಮಗಳಲ್ಲಿ ತಾವು ಪ್ರತಿ ನಿತ್ಯ ಕಾಣಿಸಿಕೊಳ್ಳುತ್ತಿರಬೇಕು ಎಂದು ತಹತಹಿಸುತ್ತಿರುವವರ ಸಂಖ್ಯೆ ಏರತೊಡಗಿದೆ. ಅಚ್ಚರಿಯ ಸಂಗತಿಯೆಂದರೆ, ಪ್ರಜ್ಞಾವಂತ ಎನ್ನಿಸಿಕೊಂಡವರೂ ಕೆಲವೊಮ್ಮೆ ಅನಗತ್ಯ ವಿವಾದಾತ್ಮಕ ಹೇಳಿಕೆಗಳನ್ನು ಕೊಡುವುದರ ಮೂಲಕವೋ, ಇನ್ನಾವುದೋ ಚಟುವಟಿಕೆಯ ಮೂಲಕವೋ- ಮಾಧ್ಯಮಗಳಲ್ಲಿ ಪ್ರಚಾರ ಗಿಟ್ಟಿಸಿಕೊಳ್ಳಲು ಪ್ರಯತ್ನಿಸುವುದನ್ನು ನಾವು ನೋಡುತ್ತಿರುತ್ತೇವೆ. 'ಯೇನ ಕೇನ ಪ್ರಕಾರೇಣ ಪ್ರಸಿದ್ಧ ಪುರುಷೋ ಭವೇತ್' ಎಂದು ನಮ್ಮ ಹಿರಿಯರು ಗೇಲಿ ಮಾಡಿದುದು ಪ್ರಾಯಃ ಇಂಥವರನ್ನು ಕುರಿತೇ. ವ್ಯಕ್ತಿ ಪ್ರತಿಷ್ಠೆಯ ವ್ಯಾಮೋಹದಿಂದ ತಪ್ಪಿಸಿಕೊಂಡು, ಕುವೆಂಪುರವರಂತೆ ಕೀರ್ತಿಯನ್ನು 'ಶನಿ' ಎಂದು ದೂರವಿರಿಸುವ ಮಂದಿ ವಿರಳವೆಂದೇ ಹೇಳಬೇಕು. ಅಂಥ ವಿರಳರಿಗೆ ತಮ್ಮ ಸಾಧನೆಗಳೇ ಮುಖ್ಯವಾಗಿರುತ್ತವೆಯೇ ಹೊರತು, ಅವುಗಳಿಂದ ಬರುವ ಕೀರ್ತಿಯಲ್ಲ. ದೊಡ್ಡ ದೊಡ್ಡ ಕೆಲಸಗಳನ್ನು ಸಾಧಿಸಿದ ಹಲವರು ಅನಾಮಿಕರಾಗಿಯೇ ಉಳಿದಿರುವುದು ಈ ಕಾರಣದಿಂದ.

ಬೇಲೂರು ಹಳೇಬೀಡುಗಳಂಥ ಲೋಕೋತ್ತರ ನಿರ್ಮಿತಿಗಳ ಶಿಲ್ಪಿಗಳು ತಮ್ಮ ಹೆಸರುಗಳನ್ನು ಎಲ್ಲೂ ದಾಖಲಿಸಿಲ್ಲ. ಮನುಷ್ಯನಿಗೆ ಉಪಯುಕ್ತವಾಗಿರುವ ಮನೆ ಮದ್ದುಗಳನ್ನು ಕಂಡುಹಿಡಿದು ಪ್ರಚಾರಕ್ಕೆ ತಂದವರು ಯಾರೆಂಬುದು ತಿಳಿಯದು. ಹತ್ತಿಯಿಂದ ನೂಲು ತೆಗೆದು, ಬಟ್ಟೆ ತಯಾರಿಸಬಹುದೆಂದು ತೋರಿಸಿಕೊಟ್ಟವರು ಯಾರೋ ಗೊತ್ತಿಲ್ಲ. ಇಂಥ ಅನಾಮಿಕ ವ್ಯಕ್ತಿಗಳು ತೆರೆಯ ಮರೆಯಲ್ಲಿಯೇ ಉಳಿದು, ಜಗದ ಹಿತ ಸಾಧಿಸಿ, ಕೀರ್ತಿ ಶನಿಯ ಕಾಟ ತಪ್ಪಿಸಿಕೊಂಡಿದ್ದಾರೆ. ಅಷ್ಟೇಕೆ, ಈ ಆಧುನಿಕ ಯುಗದಲ್ಲೂ ನಾವು ದಿನಂಪ್ರತಿ ಬಳಸುವ ಹಲವಾರು ಸಾಧನ ಸಲಕರಣೆಗಳನ್ನು ಅವಿಷ್ಕಾರಗೊಳಿಸಿದ ಅನೇಕರು ಅಜ್ಞಾತರಾಗಿಯೇ ಇದ್ದಾರೆ. ಆದ್ದರಿಂದಲೇ ಡಿ.ವಿ.ಜಿ. ಹೇಳುತ್ತಾರೆ:

'ಅಕ್ಕಿಯೊಳಗನ್ನವನು ಮೊದಲಾರು ಕಂಡವರು?। ಅಕ್ಕರದ ಬರಹಕ್ಕೆ ಮೊದಲಿಗನದಾರು?

ಲೆಕ್ಕ ವಿರಿಸಿಲ್ಲ ಜಗ ತನ್ನಾದಿ ಬಂಧುಗಳ। ದಕ್ಕುವುದೆ ನಿನಗೆ ಜಸ?

-ಮಂಕುತಿಮ್ಮ॥

■ ವೈನತೇಯ

## ಮಾತೇ ಮುತ್ತು

★ ತಾಳ್ಮೆಯಿಂದ ಕೋಪವನ್ನೂ, ಒಳ್ಳೆಯದರಿಂದ ಕೆಟ್ಟದ್ದನ್ನೂ ಜಯಿಸಬೇಕು. ಇಂದ್ರಿಯ ಲೋಲುಪನಾದ ಮನುಷ್ಯನು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು.

-ಮಹಾಭಾರತ

★ ಇಬ್ಬರೂ ಒಂದೇ ಮನಸ್ಸುಳ್ಳವರಾದರೆ ಅವರಿಗೆ ಯಾವುದು ಅಸಾಧ್ಯ?

-ಕಥಾಸರಿತ್ಸಾಗರ

★ ಮಕ್ಕಳನ್ನು ಐದು ವರ್ಷದವರೆಗೆ ಮುದ್ದಿಸಬೇಕು. ಅನಂತರದಲ್ಲಿ ಹತ್ತುವರ್ಷ ಶಿಕ್ಷೆ ನೀಡಬಹುದು. ಆದರೆ ಹದಿನಾರು ವರ್ಷಗಳಾದಾಗ ಮಕ್ಕಳನ್ನು ಮಿತ್ರರಂತೆ ತಿಳಿದು ನಡೆದುಕೊಳ್ಳಬೇಕು.

-ಸಂಸ್ಕೃತ ಸುಭಾಷಿತ

★ ಕಾರ್ಯಗಳಿಲ್ಲದೆ ಎಲ್ಲಿ ಅತಿಯಾದ ಆದರಗಳಿರುತ್ತವೆಯೋ, ಅದರ ಫಲವು ಅಹಿತವಾಗಬಹುದೆಂದು ಶಂಕಿಸಬೇಕು.

-ಪಂಚತಂತ್ರ

★ ಜನರ ನಿಂದೆಗೆ ಗುರಿಯಾಗದ ಧನಿಕ, ಆತ್ಮಪ್ರಶಂಸೆ ಮಾಡಿಕೊಳ್ಳದ ಶೂರ, ಸಮದೃಷ್ಟಿಯುಳ್ಳ ಪ್ರಭು- ಈ ಮೂವರು ದುರ್ಲಭ.

-ಯೋಗವಾಸಿಷ್ಠ

★ ವೈವಿಧ್ಯ ಇರುವ ಹಾಗೂ ಸಮಾನತೆ ಇಲ್ಲದಿರುವವರಿಗೆ ಸಮಾನತೆ ತಂದುಕೊಡುವ ಪ್ರಜಾಪ್ರಭುತ್ವ ಒಂದು ಆದರ್ಶ ಪದ್ಧತಿ.

-ಪ್ಲೇಟೋ

★ ಚಿಂತನೆ ಇಲ್ಲದೆ ಕಲಿಯುವುದು ವ್ಯರ್ಥ; ಕಲಿಯದೆ ಚಿಂತನೆ ಮಾಡುವುದು ಅಪಾಯಕರ.

-ಕನ್‌ಫ್ಯೂಷಿಯಸ್

★ ನೀನೇ ಎಲ್ಲ, ನಿನ್ನ ಬಿಟ್ಟು ಜಗವಿಲ್ಲ. ಅರಿಯದವರಿಗೆ ನೀನಾದೆ ಕಲ್ಲ! ಬಲ್ಲಂತ ಸುಜ್ಞಾನಿಗಳಿಗೆ ಸಕ್ಕರಿ ಬೆಲ್ಲ.

-ಜಂಬಗಿ ಶರಣಪ್ಪ

★ ಎದುರಿಗೆ ಪ್ರಿಯವಾದ ಮಾತನ್ನಾಡುವ, ಪರೋಕ್ಷದಲ್ಲಿ ಕಾರ್ಯವನ್ನು ವಿಘಾತಗೊಳಿಸುವ ಸ್ನೇಹಿತನನ್ನು- ಒಳಗೆ ವಿಷ ತುಂಬಿ ಮೇಲೆ ಹಾಲಿರುವ ಪಾತ್ರೆಯನ್ನು ಹೇಗೋ ಹಾಗೆ ಬಿಟ್ಟುಬಿಡಬೇಕು.

-ಅರ್ಥಶಾಸ್ತ್ರ

★ ಒಳ್ಳೆಯತನವನ್ನು ಕಂಡಾಗ ಅನುಕರಿಸಿ, ಕೆಟ್ಟದ್ದನ್ನ ಕಂಡಾಗ ಆತ್ಮಪರಿಶೀಲನೆ ಮಾಡಿಕೊಳ್ಳಬೇಕು.

-ಬೈಬಲ್

★ ಜೇನು ಮಧುರ, ಅದಕ್ಕಿಂತಲೂ ದ್ರಾಕ್ಷಿ, ಅದಕ್ಕಿಂತಲೂ ಸಕ್ಕರೆ, ಅದಕ್ಕಿಂತಲೂ ಸಜ್ಜನರ ಮಾತುಗಳು ಸಿಹಿ.

-ಲೋಕೋಕ್ತಿ

★ ಸಜ್ಜನರು ತಮಗೆ ಕೇಡೆಣಿಸುವ ಶತ್ರುಗಳಿಗೂ ಹಿತವನ್ನೇ ಕೋರುತ್ತಾರೆ.

-ಶಿಶುಪಾಲವಧ